ದಾದಿಯರ ಹಂಗಿಲ್ಲದೆ, ಬೀಪಿ ಏರಿಸುವ ಬಿಲ್ಲಿನ ತಾಪತ್ರಯವಿಲ್ಲದೆ, ಹೊಸ ಜೀವದ ಬರುವಿಕೆಗೆ ಸಾಕ್ಷಿಯಾಗಿರುವ ಬಸ್ಸು, ಆಸ್ಪತ್ರೆಯ ಹೆರಿಗೆ ವಾರ್ಡಿಗಿಂತಲೂ ಕಡಿಮೆಯೇನಲ್ಲ, ಹಡೆದವರಿಗೆ. ಒಂದೇ ಬಸ್ಸಿನಲ್ಲಿ ಸಲೀಸಾಗಿ ಎರಡು ಹೆರಿಗೆ ಮಾಡಿಸಿದ ವೆಂಕಮ್ಮ, ನಮ್ಮೂರಲ್ಲಿ ಈಗ ಬಸ್ ದಾದಿ ವೆಂಕಮ್ಮನೆಂದೇ ಬಿರುದಾಂಕಿತಳಾಗಿ ಫೇಮಸ್ಸು. ಅವಳ ಉದ್ಯೋಗವೂ ಅದೇ ಆಗಿ, ಭಡ್ತಿ ಹೊಂದಿದ್ದಾಳೆ, ತರಕಾರಿ ಮಾರುವ ಹಳೆಯ ಕಸುಬು ಬಿಟ್ಟು.

ಊರೂರಲ್ಲಿ ಶಂಭು ಮ್ಯೂಸಿಕಲ್ ನೈಟ್ಸ್ ಹೆಸರಲ್ಲಿ ಸಂಗೀತ ಕಛೇರಿ ನಡೆಸಿ, ಲಕ್ಷ ಲಕ್ಷ ಸಂಪಾದಿಸುತ್ತಿರುವ ಶಂಭು, ಸಂಗೀತ ಕಲಿತದ್ದು ಎಲ್ಲೆಂದುಕೊಂಡಿರಿ? ಇಲ್ಲೇ ಬಸ್ಸಿನಲ್ಲಿ. ಕಿವಿ ಹರಿದು ಹೋಗುವಂತೆ ಪ್ರವಹಿಸುವ ವಿವಿಧ ಭಾಷಾ ಸಿನಿಮಾ ಹಾಡುಗಳನ್ನು, ತನ್ನ ಹಳ್ಳಿಯಿಂದ ಪಟ್ಟಣದವರೆಗಿನ ಪ್ರಯಾಣದಲ್ಲಿ ಕೇಳುತ್ತ ಬರುತ್ತಿದ್ದವ, ಒಂದು ದಿನ ಬಸ್ಸಿನ ಟೇಪ್ ಹಾಳಾಗಿ, ತಾನೇ ಹಾಡತೊಡಗಿದ. ಸಹ ಪ್ರಯಾಣಿಕರು 'ವಾರೆವ್ಹಾ' ಅಂದರು. ಹೆಂಗಳೆಯರು ಕಿಸಕ್ಕನೆ ಹಲ್ಕಿರಿದರು. ಅಷ್ಟು ಸಾಕಾಯಿತು ಶಂಭುವಿಗೆ, ತನ್ನ ಪ್ರತಿಭೆ ಅರಿಯೋಕೆ. ಅಲ್ಲಿಂದ ಅವನೂ ಹಿಂದಿರುಗಿ ನೋಡಲೇ ಇಲ್ಲ. ತನ್ನೆಲ್ಲ ಸಂಗೀತ ಕಛೇರಿ ಆರಂಭಿಸುವ ಮೊದಲು ಬಸ್ಸಿನ ಚಿತ್ರಕ್ಕೆ ಪೂಜೆ ಮಾಡುವ ಕ್ರಮವನ್ನು ರೂಢಿಸಿಕೊಂಡಿದ್ದಾನೆ. ನಿಯತ್ತು ಅಂದ್ರೆ ಇದು ನೋಡಿ. ಹಾಗಾಗಿ ಶುಲ್ಕ ಇಲ್ದೇ ಸಂಗೀತ ಕಲಿತು, ಬದುಕನ್ನು ರೂಪಿಸಿಕೊಳ್ಳಬಯಸುವವರಿಗೆ, ಇದಕ್ಕಿಂತ ಸೊಗಸಾದ ತಾಣ ಬೇರೆಲ್ಲಿ ಸಿಗಲು ಸಾಧ್ಯ? ಹೇಳಿ.

ನಾಲ್ಕನೆ ತರಗತಿಗೆ ಬಂದರೂ, ಒಂದು ಪ್ಲಸ್ ಎರಡು ಕೂಡಿಸಲು ಬಾರದ ದೀಪಕ್ ಕೂಡ ಪಕ್ಕಾ ಅರ್ಥಶಾಸ್ತ್ರಿಯಂತೆ ಲೆಕ್ಕ ಹಾಕಬಲ್ಲವನಾದದ್ದು ಈ ಬಸ್ಸಲ್ಲಿ ಕಂಡಕ್ಟರಾಗಿ ಸೇರಿದ ಮೇಲೆಯೇ. ಮೂರು ರೂಪಾಯಿ ಟಿಕೆಟ್ಟಿಗೆ ನೀವು ಐನೂರರ ನೋಟು ನೀಡಿದರೂ ಛಕ್ಕಂತ ನೂರು, ಐವತ್ತು, ಹತ್ತರ ನೋಟುಗಳನ್ನು ಹೊಂದಿಸಿ, ಚಿಲ್ಲರೆ ಹಿಂದಿರುಗಿಸುವ ಚಾಕಚಕ್ಯತೆ ಇಲ್ಲಿಂದಲೇ ಬಂದದ್ದು. ನಾಲ್ಕು ತಿಂಗಳ ನಂತರದ ಹಬ್ಬಕ್ಕೆ ರೇಷ್ಮೆ ಸೀರೆ ಕೊಳ್ಳಬೇಕೆಂದರೆ, ಈಗಿನಿಂದಲೇ ದಿನಕ್ಕೆ ಎಷ್ಟು ರೂಪಾಯಿ ಉಳಿತಾಯ ಮಾಡಬೇಕೆಂದು ತನ್ನ ಹೆಂಡತಿಗೆ ಸಲಹೆ ನೀಡುವಷ್ಟು ನಿಪುಣತೆ ಕೂಡ ಬಂದಿದೆ ಇವನಿಗೆ. ಎಲ್ಲ ಬಸ್ಸಿನ ಕೃಪೆಯಿಂದಲೇ...

ಈಚೆಗೆ ಸಾಹಿತಿಯೊಬ್ಬರ ಹೇಳಿಕೆ ಸಾಮಾಜಿಕ ಜಾಲತಾಣಗಳಲ್ಲೆಲ್ಲ ಭಾರಿ ಸುದ್ದಿ ಮಾಡಿತು. ಕನ್ನಡ ಭಾಷೆ ಉಳಿಯಬೇಕಾದ್ರೆ, ಬಳಸುವವರು ಹೆಚ್ಚಾಗಬೇಕಂತೆ. ನಮ್ಮ ಲಕ್ಷಾಂತರ ಬಸ್ ಚಾಲಕರಿಗಿಂತ ಉತ್ತಮರು ಯಾರು ಸಿಕ್ಕಿಯಾರು ಮತ್ತೆ? ಶಬ್ದಕೋಶದಲ್ಲಿ ಸಿಗದ, ಎಲ್ಲರನ್ನೂ ನಾಚಿ ನೀರಾಗಿಸುವಂತ ಸಿರಿಗನ್ನಡ ಶಬ್ದಭಂಡಾರ ಇರುವುದು ಇವರ ಬಳಿಯಲ್ಲೇ. ಬೇಕಿದ್ದರೆ, ಇವರನ್ನೊಮ್ಮೆ ಎದುರು ಹಾಕಿಕೊಂಡು ನೋಡಿ. ಭಾಷೆಯನ್ನು ಉಳಿಸುತ್ತಿರುವ ಚಾಲಕರ ಅಸ್ತಿತ್ವ ಕೂಡ ಬಸ್ಸಿನಿಂದ ತಾನೇ? ಪಟಪಟಾಂತ ಕನ್ನಡ ಶಬ್ದಗಳ ಮುತ್ತು ಉದುರಿಸುವಲ್ಲಿ ಪ್ರಾವೀಣ್ಯತೆ ಇವರದೇ. ಭಾಷೆ ಉಳಿಸುವ ಹೊಣೆ ಚಾಲಕರ ಮೇಲಿದ್ದರೆ, ಅವರನ್ನು ಉಳಿಸುವ ಹೊಣೆ ಬಸ್ಸುಗಳದ್ದು. ಒಪ್ಪುವಂತಹ ವಿಚಾರ ಅಲ್ಲವೇ?

ವಿಶ್ವದಲ್ಲೇ ಹೆಚ್ಚಿನ ಸಂಖ್ಯೆಯಲ್ಲಿ ಚಾಲಕರು ಇರುವುದು ನಮ್ಮ ದೇಶದಲ್ಲಿ. ದೊಡ್ಡ ಗಾಡಿಗಳನ್ನು ಓಡಿಸುವ ತರಬೇತಿ ಸಿಗುವುದು ಎಲ್ಲೆಂದುಕೊಂಡಿರಿ? ಮತ್ತೆಲ್ಲಿ? ಬಸ್ಸಲ್ಲೇ. ತಮ್ಮ ಜೀವವನ್ನು(ಉಳಿದವರ ಜೀವವನ್ನೂ) ಒತ್ತೆಯಿಟ್ಟು, ಕಲಿಯುತ್ತಾರೆ ಚಾಲನೆಯನ್ನು. ಜೊತೆಗೆ ನೀವು ದ್ವಿಚಕ್ರ ಯಾ ಚತುರ್ ಚಕ್ರ ವಾಹನಚಾಲಕರಾಗಿ ದಾರಿಗಿಳಿದರೆ, ನಿಮ್ಮ ಚಾಲನೆಯನ್ನು ಸುಧಾರಿಸುವುದು ಬಸ್ಸುಗಳೇ. ಬಸ್ಸುಗಳು ಓಡುವ ರಭಸಕ್ಕೆ, ನೀವು ಗಲಿಬಿಲಿಯಾಗಿ